# ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.)

8, ಅಗಸ್ತ್ಯ ಎನ್‌ಕ್ಲೇವ್, 13ನೇ ಮುಖ್ಯರಸ್ತೆ, ಬಿ.ಎಸ್.ಕೆ. 1ನೇ ಹಂತ, ಶ್ರೀನಗರ, ಬೆಂಗಳೂರು–560050

## 2021–22ನೇ ಸಾಲಿನ ಪಾರೀಣ ಪರೀಕ್ಷೆಯ ಪ್ರಶ್ನೆ ಪತ್ರಿಕೆ : ಸಾಹಿತ್ಯ ವಿಭಾಗ

**ಅವಧಿ : 3 ಗಂಟೆ** **ಅಂಕಗಳು : 100**

(ಉತ್ತರಗಳು ನೇರವಾಗಿರಲಿ. ನಿಗದಿತ ಅಂಕಗಳನ್ನೂ ಸಮಯವನ್ನೂ ಗಮನದಲ್ಲಿರಿಸಿಕೊಂಡು ಉತ್ತರ ಬರೆಯಿರಿ.)

1. ಬಸವಪ್ಪ ಶಾಸ್ತ್ರಿಗಳು ಮತ್ತು ಪುಲಿಗೆರೆ ಸೋಮನಾಥ ಇವರ ಕವಿಪರಿಚಯವನ್ನು ಬರೆಯಿರಿ 05

2. ಸಾವಿತ್ರಿ ಚರಿತ್ರೆಯಲ್ಲಿ ನಿಮಗೆ ಪ್ರಿಯವೆನಿಸಿದ ಭಾಗದ ಕತೆಯನ್ನು ಆರೆಂಟು ವಾಕ್ಯಗಳಲ್ಲಿ ಬರೆಯಿರಿ. 05

3. ಈ ಶಬ್ದಗಳ ಅರ್ಥವನ್ನು ಬರೆಯಿರಿ: 10

   ಬಾಧಕಧ್ವಾಂತ, ಪುಟಿಕೆ, ಸದಾಗತಿ, ಮಹಿತೆ, ಹೃತರಾಜ್ಯ, ಅರುಜ, ತೀವು, ಉಣ್ಮೆ, ಪೆರ್ಚು, ತೆಕ್ಕನೆ

4. ಏಕವಾಕ್ಯದ ಉತ್ತರಗಳನ್ನು ಬರೆಯಿರಿ: 05

   ಅ. "ಮನದೊಳಗೆ ಶಿವಮೂರ್ತಿ ಕೈಯ್ಯೊಳಗೆ ಹಾಲಪ್ಪೆ" ಇದು ಯಾವ ಕಾವ್ಯದ್ದು?
   ಆ. "ಶಿವನ ಸಾಕ್ಷಾತ್ಕಾರ" ಕಾವ್ಯವನ್ನು ಬರೆದವರು ಯಾರು?
   ಇ. ಸೌರಾಷ್ಟ್ರ ವರ್ಣನೆಯಲ್ಲಿ ಕನಕದಾಸರು "ನಾರಾಯಣನುರಶ್ಚಿಹ್ನೆ" ಎಂದು ಯಾರನ್ನು ಕರೆದಿದ್ದಾರೆ?
   ಈ. ಹರಿಹರನ ರಚನೆಯ ಯಾವುದಾದರೊಂದ ಲಲಿತ ರಗಳೆಯ ಹೆಸರನ್ನು ಬರೆಯಿರಿ.
   ಉ. 'ಪಿಂದು ಪೆರಗಾಗಿ ಪುಗೆ ಚಿಃ ಎಂದವನಂ ರಾಜ್ಯಲಕ್ಷ್ಮಿ ಪೇಸಿ ಬಿಸುಟ್ಟಳ್' ಈ ವಾಕ್ಯ ಎಲ್ಲಿಯದು?

5. "ಜಗತ್ತು ಅಭಿನ್ನ" ಎಂಬುದನ್ನು ಮಾದರಸ ಕವಿಯ ಮಾತುಗಳಲ್ಲಿ ಬರೆಯಿರಿ. 05

6. ತಪ್ಪುಗಳಿದ್ದರೆ ಸರಿಪಡಿಸಿ – 05

   ಅ. "ಇಂತು ತಿರೆಯಂ ಪೊರೆಯುತಿರಲೊರ್ಮೆ ರಾಘವನಂ" ಇದು ರಾಮಾಯಣದರ್ಶನಂ ಕಾವ್ಯದ್ದು.
   ಆ. ಮುದ್ದಣನ ಅದ್ಭುತ ರಾಮಾಯಣವು ಮಧ್ಯಕಾಲೀನ ಕನ್ನಡದಲ್ಲಿ ರಚಿತವಾಗಿದೆ.
   ಇ. ರನ್ನನ "ಭೀಮಸೇನವಿಜಯ"ದ ಇನ್ನೊಂದು ಹೆಸರು "ಗದಾಯುದ್ಧ ದರ್ಪಣಂ".
   ಈ. "ಯಮನ ಸೋಲು" ಸಾವಿತ್ರಿ ಚರಿತ್ರೆಯ 6ನೇ ಆಶ್ವಾಸದಲ್ಲಿ ಬರುತ್ತದೆ.
   ಉ. "ಪಾಲನೂಡಿ ಪುಲಿಯಂ ಸಾಕಲ್ಕೆ ವಿಶ್ವಾಸಿಯೇ?" ಈ ಮಾತು ಶಿವನ ಸಾಕ್ಷಾತ್ಕಾರದಲ್ಲಿ ಬರುತ್ತದೆ.

7. ಜ್ಞಾನಾರ್ಜನೆಯ ಮಾರ್ಗವನ್ನು ಸೋಮೇಶ್ವರ ಶತಕದಲ್ಲಿ ಹೇಗೆಂದು ಹೇಳಲ್ಪಟ್ಟಿದೆ? 05

8. ಭೀಮನು ದುರ್ಯೋಧನನನ್ನು ವೈಶಂಪಾಯನ ಸರೋವರದಿಂದ ಹೊರಗೆ ಬರುವಂತೆ ಮಾಡಿದ ವೃತ್ತಾಂತವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ 10

9. ಕೆಳಗಿನ ಪದ್ಯಕ್ಕೆ ವ್ಯಾಖ್ಯಾನವನ್ನು ಬರೆಯಿರಿ 10

   ಧರೆಯ ಭಾರವನಿಳುಹುವರೆ ಶಿಷ್ಟರಂ ಪೊರೆಯೆ
   ದುರುಳರಂ ತರಿದು ಧರ್ಮೋದ್ಧಾರ ಗೈಯುವರೆ
   ಹರಿ ಬಂದನಿಳೆಗೆ ಕೃಷ್ಣಾವತಾರದೊಳಿವನೆ ನಿಶ್ಚಯಂ ವಿಶ್ವೇಶನು
   ವರ ಪಾಂಡವ ಪ್ರತಿಷ್ಠಾಪನಾಚಾರ್ಯನೆಮ
   ಗರಿಯೆ ಭಾವನುಮಾಗಿ ಸನ್ಮಾರ್ಗ ದರ್ಶನವ
   ನುರೆ ತಿಳಿಸಿ ಪೊರೆವನೆಂದಾತಂಗೆ ಮಗುಳೆ ವಂದನೆ ಗೆಯ್ದುರವರೆಲ್ಲರು ॥

10. ಕೋಳೂರು ಕೊಡಗೂಸಿನ ವೃತ್ತಾಂತವನ್ನು ಬರೆಯಿರಿ 10

*[ಹಾಳೆಯನ್ನು ಮಗುಚಿ ನೋಡಿ]*

11. ಈ ಹಳಗನ್ನಡದ ಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ 10

"ಮೆಯ್ಗೊಂಡು ಪುಟ್ಟಿ, ಮಡದಿಯ ನೆವದಿಂ ದುಟ್ಟರನೆಲ್ಲಂ ಕೊಂದಿಕ್ಕಿದೀ ಮೈಮೆಯಾರ್ಗೆ ನೆರಂ ಸಾಜಮಾಗೆ
ರಾವಣನಂತಪ್ಪ ದುಟ್ಟರೀಲೋಗದೊಳಿಲ್ಲಂ, ಬಲ್ಗೈಯವಂಗೆ ನೀನಲ್ಲದೆ ಮಾರಾಂತರುಂಟೆ!
ಕಡಲಂ ಕಟ್ಟಿದುದೆಂತಪ್ಪ ಸಾಸದ ಕಜ್ಜಂ. ಲೋಗರಂ ಪೊರೆಯಲೆನಿತು ಬನ್ನಮನೊಳಕೊಂಡೈ;
ಪುಟ್ಟಿದ ಪಟ್ಟಣಮನುಳಿದೈ; ತಾಯ್ತಂದೆ ವಿರಂಮರೆದ; ಪದಿನಾಲ್ಗಾಲಂ ಕಾಡೊಳೆ ತಿರಿದೈ;
ಸೋದರನಿವಂ ಲಚ್ಚುಮಣಂ ಕಿರಿಯಂ ಬೆಂಡಾದಂ; ಸೀತೆಯೀ ಲೋಕಮಾತೆಯೆಂತು
ರಕ್ಕಸನೊಳ್ ಬಂದಿಯಾದಳ್! ಪಲನುಡಿಯೇಂ? ರಾಘವ ನಿನ್ನಭಯಪ್ರಸಾದದತ್ತಣಿನೀ ಸುರರುಂ
ನರರುಮೆಣಿಕೆಯಿಲ್ಲದಿರ್ಪರ್"

13. ಪ್ರಸ್ತಾರವನ್ನು ಗುರುತು ಮಾಡಿ, ಲಕ್ಷಣವನ್ನು ಬರೆಯಿರಿ 10

ಉಡುರಾಜಂ ಕಳೆಗುಂದಿ ಪೆರ್ಚದಿಹನೇ? ನ್ಯಗ್ರೋಧ ಬೀಜಂ ಕೆಲಂ
ಸಿಡಿದು ಪೆರ್ಮರನಾಗದೇ? ಎಳೆಗರುಂ ಎತ್ತಾಗದೇ? ಲೋಕದೊ
ಳ್ಮಿಡಿ ಪಣ್ಣಾಗದೇ? ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ? ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

14. ಈ ಸಾಲುಗಳು ಯಾವ ಪದ್ಯಗಳಿಂದ ಆಯ್ದದ್ದು? ಕವಿಯನ್ನು ಹೆಸರಿಸಿ. 05

1. ಶ್ರೀಗಿರಿಜೇಶ್ವರನಾತ್ಮಾಭಿರಾಮ ಸದ್ವಾಗೀಶಪಿತ ಪರಂಧಾಮ
2. ಒಂದೆರಡು ಮತ್ತರಂತರದಿಂದಂ ಪೊರಮಟ್ಟ ಪಜ್ಜೆಯಿಂ
3. ವಿಶ್ವಾಮಿತ್ರಂ, ಶೈಬ್ಯಂ, ಚ್ಯವನಂ, ಕಣ್ವಂ ಮುಂತಪ್ಪ ಮೂಡಣದೆಸೆಯವರುಂ
4. ನೂರ್ವರುಪುತ್ರರುದರದಿ ಜನಿಸುವಂದದಿ ವರವ ಕರುಣಾನಿಧಿಯೆ ಕರುಣಿಸೆನೆ
5. ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬಣ್ಣದ ಬೊಂಬೆಯಂತೆ

15. ಹೊಂದಿಸಿ ಬರೆಯಿರಿ 05

| | |
|---|---|
| 1. ಬಸವಪ್ಪ ಶಾಸ್ತ್ರಿಗಳು | ಉಡುತಡಿ |
| 2. ರನ್ನ | ಬಾಡ |
| 3. ಕನಕದಾಸರು | ಅಭಿನವ ಕಾಳಿದಾಸ |
| 4. ಹರಿಹರ | ಮುದುವೊಳಲು |
| 5. ಅಕ್ಕಮಹಾದೇವಿ | ಚಂಪೂಕಾವ್ಯ |

* * * * *